ಸದಸ್ಯರೊಬ್ಬರು ಹೇಳಿದರು. ಸ್ತ್ರೀ ಶಕ್ತಿ ಪ್ರಚಾರ ಮಾಡತಕ್ಕಂಥವರೇ ಲಾಟರಿಗೆ ಹೋಗುತ್ತಾರೆ ಎಂದಿದ್ದಾರೆ. ಬೇಲಿಯೇ ಎದ್ದು ಹೊಲ ಮೇಯ್ದರೆ ಅದಕ್ಕೆ ಇನ್ನೊಂದು ಬೇಲಿ ಎಲ್ಲಿ ಹಾಕುವುದು? ಆದರೆ ಸ್ಕೂಲ್‌ಗಳ ಮುಂದೆ, ದೇವಸ್ಥಾನಗಳ ಮುಂದೆ, ಈಗ ನಾವು ಕುಡಿಯುವ ಅಂಗಡಿಗಳನ್ನು ಹೇಗೆ ನಿಬಂಧನೆಗಳ ಮೂಲಕ ನಾವು ದೂರ ಇಟ್ಟಿದ್ದೇವೆ, ಹಾಗೆಯೇ ಸಾಮಾನ್ಯ ಜನಗಳಿಗೆ ಎಟುಕದ ರೀತಿಯಲ್ಲಿ ಇವುಗಳನ್ನು ರೆಗ್ಯುಲೇಶನ್ ಮಾಡಲಿಕ್ಕೆ ತಾವುಗಳು ಸಲಹೆಗಳನ್ನು ಕೊಟ್ಟರೆ ನಾನು ಮುಕ್ತವಾದಂಥ ಮನಸ್ಸಿನಿಂದ ಸ್ವಾಗತ ಮಾಡುತ್ತೇನೆ. ಇನ್ನು ಎರಡನೆಯದಾಗಿ ಒಂದು ರಿಪೋರ್ಟ್ ತರಿಸಿಕೊಳ್ಳಿ ಅಂತ ಸೂಚನೆ ಮಾಡಿದ್ದೀರಿ ಈ ಎಲ್ಲಾ ವಿಚಾರದ ಬಗ್ಗೆ ನನ್ನ ಬಜೆಟ್ ಮಂಡಿಸುವ ಕಾಲದಲ್ಲಿ ನಾನು ಹೇಳುತ್ತೇನೆ.

ಅಧ್ಯಕ್ಷರು : ಆಯಿತು, ಶೆಟ್ಟರ್‌ರವರೇ ದಯವಿಟ್ಟು ನಿಮ್ಮ ಸ್ಥಾನಕ್ಕೆ ಹೋಗಿ.

(ಈ ಹಂತದಲ್ಲಿ ಭಾಜಪ ಸದಸ್ಯರು ಧರಣಿ ಹಿಂತೆಗೆದುಕೊಳ್ಳುವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಸಚಿವರು) : ಅಧ್ಯಕ್ಷರೆ 4-3-2003ರ ಲಿಖಿತ ಮೂಲಕ ಉತ್ತರಿಸಬೇಕಾದ 94 ಪ್ರಶ್ನೆಗಳ ಪೈಕಿ 58 ಉತ್ತರಗಳನ್ನು ಈ ಮೂಲಕ ಸದನದ ಮುಂದೆ ಮಂಡಿಸುತ್ತಿದೇನೆ.

ಅಧ್ಯಕ್ಷರು : ಮಂಡಿಸಲಾಯಿತು. (ಅನುಬಂಧ-1)

2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಸ್ . ಎಂ. ಕೃಷ್ಣ (ಮುಖ್ಯ ಮಂತ್ರಿಗಳು) : ಅಧ್ಯಕ್ಷರೇ ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಕರ್ನಾಟಕ ಸರ್ಕಾರದ 2001-2002ನೇ ಸಾಲಿನ ಹಣಕಾಸು ಲೆಕ್ಕಪತ್ರಗಳು ಹಾಗೂ ಧನ ವಿನಿಯೋಗ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಬಿ. ರಮಾನಾಥರೈ (ಸಾರಿಗೆ ಸಚಿವರು) : ಅಧ್ಯಕ್ಷರು ನನ್ನ ಹೆಸರಿನ ಮುಂದಿರುವ ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1957ರ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆಯ 16(2) ರ ಪ್ರಕರಣದ ಮೇರೆಗೆ :

1. ಬೆಂಗಳೂರಿನ ಶ್ರೀ ರಾಘವೇಂದ್ರ ಗೋ ಆಶ್ರಮ ಟ್ರಸ್ಟ್ ಇವರು ಹೊಂದಿರುವ ಟಾಟಾ ಸುಮೋ ಅಮ್ನಿ ಬಸ್‌ಗೆ (ಚಾಸಿಸ್ ಸಂಖ್ಯೆ : 418008 ಹೆಚ್: 22: 9:19162 ಇಂಜಿನ್‌ಸಂಖ್ಯೆ : 483 ಡಿಎಲ್ -47 : ಹೆಚ್ :22: 757481) ಕರ್ನಾಟಕ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 4.3.2002 ರಂದು ಹೊರಡಿಸಲಾದ ಒಸಾಇ: 32: ಟಿಎಂಟಿ: 2001ನೇ ಸಂಖ್ಯೆಯ ಅಧಿಸೂಚನೆ.

2. ಮಂಗಳೂರಿನ ಜೀನತ್ ಬಕ್ಷ ಯತೀಂ ಖಾನ್ ಸಂಸ್ಥೆ ಇವರು ಹೊಂದಿರುವ ವಾಹನ ಸಂಖ್ಯೆ : ಕೆಎ -19 1119ಕ್ಕೆ ಕರ್ನಾಟಕ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 9.5.2002ರಂದು ಹೊರಡಿಸಲಾದ ಒಸಾಇ: 91:ಟಿಎಂಟಿ: 2001ನೇಸಂಖ್ಯೆಯ ಅಧಿಸೂಚನೆ:

3. ಮೆ: ಸಿಂಗಮ್ಮ ಶ್ರೀನಿವಾಸನ್ ಫೌಂಡೇಶನ್ ತರಂಗ, ರಾಜಮಹಲ್ ವಿಲಾಸ್ ಎಕ್ಸ್‌ಟೆನ್‌ಷನ್ ಬೆಂಗಳೂರು ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ : ಕೆಎ-04-ಜಡ್-4027 (ಆಮ್ನಿ ಬಸ್) ಕ್ಕೆ ಕರ್ನಾಟಕ್ಕೆ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 6.11.2002ರಂದು ಹೊರಡಿಸಲಾದ ಒಸಾಇ:3:ಟಿಎಂಟಿ: 2002ನೇಸಂಖ್ಯೆಯ ಅಧಿಸೂಚನೆ.

4. ಜೀನತ್ ಬಕ್ಷ್ ಯತೀಂ ಖಾನ್ ಅನ್ಸಾರಿ ರಸ್ತೆ, ಬಂದರೆ ಮಂಗಳೂರು ಸಂಸ್ಥೆಯು ಹೊಂದಿರುವ ವಾಹನ ಸಂಖ್ಯೆ : ಕೆಎ-19, ಎನ್-1980ಕ್ಕೆ ಕರ್ನಾಟಕ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 4.11.2002ರಂದು ಹೊರಡಿಸಲಾದ ಒಸಾಇ:81:ಟಿಎಂಟಿ: 2001ನೇ ಸಂಖ್ಯೆಯ ಅಧಿಸೂಚನೆ,

5. ಅಂಗವಿಕಲರಿಗೆ ಪುನಃಶ್ಚೇತನ ಸಂಸ್ಥೆ, ಗಂಗಾವತಿ, ಕೊಪ್ಪಳ ಜಿಲ್ಲೆ ಇವರು ಹೊಂದಿರುವ ವಾಹನ ಸಂಖ್ಯೆ : ಕೆಎ-37 ಎಂ: 1115 (ಖಾಸಗಿ ಸೇವಾ ವಾಹನ ಟೆಂಪೋ ಟ್ರಾವಲರ್ಸ್ ಚಾಸಿಸ್ ಸಂಖ್ಯೆ : ಟಿ : 58005947 ಎಂ1, ಇಂಜಿನ್ ಸಂಖ್ಯೆ :ಡಿ : 02007331) ವಾಹನಕ್ಕೆ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ 12.12.2002ರಂದು ಹೊರಡಿಸಲಾದ ಒಸಾಇ: 1:ಟಿಎಂಟಿ: 2002ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

ಅಧ್ಯಕ್ಷರು : ಮಂಡಿಸಲಾಯಿತು.

3. ಶಾಸನ ರಚನೆ

ಅ. ವಿಧೇಯಕಗಳ ಮಂಡನೆ

1 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ತಿದ್ದುಪಡಿ) ವಿಧೇಯಕ 2002.

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಅಧ್ಯಕ್ಷರೇ 2002ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ 2002ರ ಕರ್ನಾಟಕ ರಾಜ್ಯ ಸಿಮಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ 2002ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(2) ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2002

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 2002ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ.